# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ –೧೫೬<br>Volume - 156 | ಬೆಂಗಳೂರು, ಮಂಗಳವಾರ, ೨೨, ಜೂನ್, ೨೦೨೧ (ಆಷಾಢ, ೦೧, ಶಕವರ್ಷ, ೧೯೪೩)<br>BENGALURU, TUESDAY, 22, JUNE, 2021 ( ASHADHA , 01, SHAKAVARSHA, 1943) | ಸಂಚಿಕೆ ೮೫<br>Issue 85 |
|---|---|---|


## ಭಾಗ ೬

### ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು

<u>ಕರ್ನಾಟಕ ಸರ್ಕಾರ</u>

ಸಂಖ್ಯೆ: ಕಂಇ 38 ಎಕ್ಯೂಗು 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:15.06.2021.

### ಅಧಿಸೂಚನೆ

ಕಲಬುರ್ಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಮಾಡ್ಯಾಳ ಗ್ರಾಮದ ಜಮೀನುಗಳ ಸರ್ವೆ ನಂ.12, 14/1, 14/2 ಮತ್ತು ಇತರೆಗಳಲ್ಲಿನ ಒಟ್ಟು 04–30 ಎಕರೆ ಜಮೀನನ್ನು ಭೀಮಾ ನದಿಯಿಂದ ಅಮರ್ಜಾ ಜಲಾಶಯಕ್ಕೆ ಮತ್ತು ಸುತ್ತಮುತ್ತಲಿನ ಕೆರೆಗಳಿಗೆ ನೀರು ಪೂರೈಸುವ ಯೋಜನೆಗಾಗಿ ಭೂಸ್ವಾಧೀನಪಡಿಸಲು ಭೂಸ್ವಾಧೀನ ಕಾಯ್ದೆ 2013ರ ಕಲಂ–19(7)ರಡಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಪ್ರಕರಣದಲ್ಲಿ ಕಲಂ–19(1)(2)ರ ಅಂತಿಮ ಅಧಿಸೂಚನೆಯನ್ನು ಹೊರಡಿಸಲು ದಿನಾಂಕ:05–03–2020 ರಿಂದ 30–09–2021ರವರೆಗೆ ಕಾಲಾವಧಿ ವಿಸ್ತರಿಸಿ ಆದೇಶಿಸಲಾಗಿದೆ.

ನಿಗದಿತ ಅವಧಿಯೊಳಗೆ ಭೂಸ್ವಾಧೀನ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸುವಂತೆ ಮತ್ತು ಭವಿಷ್ಯದಲ್ಲಿ ಯಾವುದೇ ಕಾರಣಕ್ಕೂ ಕಾಲಾವಧಿಯನ್ನು ವಿಸ್ತರಿಸಲಾಗುವುದಿಲ್ಲವೆಂದು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ನಾಗವೇಣಿ.ಎಸ್.ಕೆ.)
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಸ್ವಾಧೀನ)

**PR-269**

ಮಾನ್ಯ ಆಯುಕ್ತರು, ಪುನರ್ವಸತಿ ಮತ್ತು ಭೂಸ್ವಾಧೀನ ಹಾಗೂ ಪದನಿಮಿತ್ತ ಸರಕಾರದ ಕಾರ್ಯದರ್ಶಿಗಳು, ಕರ್ನಾಟಕ ಸರಕಾರ, ಕಂದಾಯ ಇಲಾಖೆ, ಕೃಷ್ಣಾ ಮೇಲ್ದಂಡೆ ಯೋಜನೆ, ನವನಗರ, ಬಾಗಲಕೋಟೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರ ಹಕ್ಕು ಪುನರ್ವಸತಿ ಮತ್ತು ಪುನರನಿರ್ಮಾಣ ಕಾಯ್ದೆ 2013ರ (ದಿನಾಂಕ:01-01-2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ಭೂಸ್ವಾಧೀನ ಕಾಯ್ದೆ ಕಲಂ 19(1) ರೊಂದಿಗೆ ಓದಲಾದ ಪ್ರಕರಣ 19(2) ರ ಅನ್ವಯ ಘೋಷಣೆ

ಸಂ. ಕಂಇ/ಭೂಸ್ವಾ2ಅ/ಸಿಆರ್-21/2019-20/ ದಿನಾಂಕ: 07-06-2021.

ಭಾರತ ಸರ್ಕಾರವು "The Right to fair Compensation and Transparency in Land Acquisition Relhabitlitation and Resettlement Act 2013" Dated:01-01-2014 ರಂದು ಜಾರಿಗೆ ಬಂದಿರುವುದರಿಂದ ಹಿಂದಿನ ಭೂಸ್ವಾಧೀನ ಕಾಯ್ದೆ 1894 ನಿರ್ದೇಶನಗೊಂಡಿರುತ್ತದೆ. ಭೂಸ್ವಾಧೀನ ಅಧಿನಿಯಮ (2013ನೇ ಕೇಂದ್ರ ಅಧಿನಿಯಮ) ಪ್ರಕಟಣೆ 19 ರ ಅನ್ವಯ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿದ ಜಮೀನು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ (ನೀರಾವರಿ ಯೋಜನೆಗಾಗಿ) ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ದೊಡ್ಡೇರಿ ಗ್ರಾಮದಲ್ಲಿ ಬರುವ ತುಂಗಾ ಮೇಲ್ದಂಡೆ ಯೋಜನೆಯ ಮೈನರ್ ಕಾಲುವೆ ನಿಮಾಣದ ಉದ್ದೇಶಕ್ಕಾಗಿ ಸಲುವಾಗಿ ಬೇಕಾಗುವುದೆಂದು ಈ ಮೂಲಕ ಮಾನ್ಯ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ ದಾವಣಗೆರೆ ಇವರ ಪತ್ರದ ನಂ.ಭೂ.ಸ್ವಾ.ಸಿ.ಆರ್/105/2018-19 ದಿನಾಂಕ:14-01-2019 ಕ್ರಮ ಸಂಖ್ಯೆಯ ಅಧಿಸೂಚನೆಯಲ್ಲಿ ತಿಳಿಯಪಡಿಸಲಾಗಿದೆ. ಹಾಗೂ ದಿನಾಂಕ:29-03-2019 ರಂದು ರಾಜ್ಯ ಪತ್ರದಲ್ಲಿ ಪ್ರಕಟಣೆಯಾಗಿದೆ.

ಸದರಿ ಭೂಸ್ವಾಧೀನ ಅಧಿನಿಯಮ ಪ್ರಕಾರ 3ನೇ ಪ್ರಕರಣ (ಜಿ) ಖಂಡದ ಮೇರೆಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ ಇವರನ್ನು ಸದರಿ ಜಮೀನುಗಳ ಸಂಬಂಧದಲ್ಲಿ ಮುಂದಿನ ಎಲ್ಲಾ ಕಾನೂನು ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಯವರ ಪ್ರಕಾಶನದ ಈ ಕಾರ್ಯಗಳನ್ನು ನಿರ್ವಹಿಸುವಂತೆ ಈ ಮೂಲಕ ನೇಮಿಸಲಾಗಿದೆ. ಮತ್ತು ಜಮೀನಿನ ಅಧಿಕೃತ ಸಂಗ್ರಹಣೆಗಾಗಿ ಆದೇಶಗಳನ್ನು ಪಡೆಯುವಂತೆ ಸದರಿ ಅಧಿನಿಯಮ ಪ್ರಕರಣ 20 ರ ಮೇರೆಗೆ ನಿರ್ದೇಶಿಸಲಾಗಿದೆ.

ಸದರಿ ಭೂಸ್ವಾಧೀನ ಅಧಿನಿಯಮ ಅನುಸೂಚಿ-2 ರ ಮತ್ತು ಕಲಂ 31 ರ ರನ್ವಯ ಪುನರ್‌ವಸತಿ ಹಾಗೂ ಪುನರ್‌ವ್ಯವಸ್ಥೆ ಐತೀರ್ಪು ರಚಿಸಲಾಗುವುದು ಎಂದು ಉದ್ದೇಶಿಸಲಾಗಿದೆ. ಕಲಂ 19(1) ರ ಅಡಿಯಲ್ಲಿ ಸೂಚಿಸಿದಂತೆ 15(2) ರ ಅನ್ವಯ 15(1) ನಿಗದಿತ ನಮೂನೆಯಲ್ಲಿ ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ಮಾನ್ಯ ಆಯುಕ್ತರು, ಪು.ಪು ಭೂಸ್ವಾ, ಪದನಿಮಿತ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಕೃ.ಮೇ.ಯೋ ನವನಗರ, ಬಾಗಲಕೋಟೆಯವರಿಂದ ದಿನಾಂಕ:12-12-2019 ರಂದು ಒಪ್ಪಿಗೆ ಪಡೆಯಲಾಗಿರುತ್ತದೆ.

ಸದರಿ ಅಧಿನಿಯಮ ಕಲಂ. 18 ರನ್ವಯ ಪುನರ್‌ವಸತಿ, ಪುನರ್‌ವ್ಯವಸ್ಥೆಯ ಸಾರಾಂಶದ ಅನುಮೋದಿತ ಕರಡುಯಾದಿಯನ್ನು ಕಲಂ 19(2) ರನ್ವಯ ಘೋಷಿಸಲಾಗಿದೆ.

ಸದರಿ ಅಧಿನಿಯಮ 21 ನೇ ಪ್ರಕರಣ ಉಪ ಪ್ರಕರಣ (1) ಪ್ರಕಟಿಸಲಾದ ಈ ನೋಟೀಸಿನ ಪ್ರಕಟಣೆ ನಂತರ ಭೂಮಿ ಸ್ವಾಧೀನ ಪಡಿಸಿಕೊಳ್ಳಬೇಕೆಂದು ಸರ್ಕಾರವು ಉದ್ದೇಶಿಸಿದೆ.

ಸದರಿ ಜಮೀನುಗಳ ವಿವರವನ್ನು ಸೂಚಿಸುವ ಒಂದು ನಕಾಶೆಯನ್ನು ಆಸಕ್ತಿ ಜನರ ಶಿವಮೊಗ್ಗ, ಇವರ ಕಛೇರಿಯಲ್ಲಿ ಇಡಲಾಗಿದೆ.

## ಅಧಿಸೂಚನೆ

ಜಿಲ್ಲೆ:ದಾವಣಗೆರೆ ತಾಲ್ಲೂಕು:ಹೊನ್ನಾಳಿ ಹೋಬಳಿ:ಗೋವಿನಕೋವಿ ಗ್ರಾಮ:ದೊಡ್ಡೇರಿ

| ಕ್ರ.ಸಂ | ಖಾತದಾರರ ಹೆಸರು | ಸಾಗುವಳಿದಾರರ ಹೆಸರು | ಪಹಣಿಯಂತೆ | | ವಿಸ್ತೀರ್ಣ | ತರಹೆ | ಚೆಕ್ಕುಬಂದಿ | | | | ಭೂಸ್ವಾಧೀನ ವಿವರ ವಿಸ್ತೀರ್ಣ ಎ–ಗುಂ | ತಪಶೀಲು |
|---|---|---|---|---|---|---|---|---|---|---|---|---|
| | | | ಸ.ನಂ | ಹಿಸ್ಸಾ ನಂ. | | | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| 1 | ಶ್ರೀಮತಿ ಶಾರದಮ್ಮ ಕೋಂ ಡಿ.ಎನ್ ಈಶ್ವರಯ್ಯ | ಶ್ರೀಮತಿ ಶಾರದಮ್ಮ ಕೋಂ ಡಿ.ಎನ್ ಈಶ್ವರಯ್ಯ | 71 | 1ಪಿ1 | 15–10<br>ಪಿಕೆ0–02<br>15–08 | ಖುಷ್ಕಿ | 71/3 | 71/1 | 71/1 | 71/1 | 0–05 | 75 ಅಡಿಕೆ ಮರಗಳು 2 ತೆಂಗಿನ ಮರಗಳು |
| 2 | ಶಿವಕುಮಾರಯ್ಯ ಬಿನ್ ಈಶ್ವರಯ್ಯ | ಶಿವಕುಮಾರಯ್ಯ ಬಿನ್ ಈಶ್ವರಯ್ಯ | 71 | 1ಪಿ2 | 15–10<br>ಪಿಕೆ0–02<br>15–08 | ಖುಷ್ಕಿ | 71/3 | 71/1 | 71/1 | 71/1 | 0–05½ | 85 ಅಡಿಕೆ ಮರಗಳು 3 ತೆಂಗಿನ ಮರಗಳು |
| 3 | ಚನ್ನಯ್ಯ ಬಿನ್ ಈಶ್ವರಯ್ಯ | ಚನ್ನಯ್ಯ ಬಿನ್ ಈಶ್ವರಯ್ಯ | 71 | 1ಪಿ3 | 15–10<br>ಪಿಕೆ0–02<br>15–08 | ಖುಷ್ಕಿ | 71/3 | 71/1 | 71/1 | 71/1 | 0–07½ | 120 ಅಡಿಕೆ ಮರಗಳು 4 ತೆಂಗಿನ ಮರಗಳು |

| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
|---|---|---|---|---|---|---|---|---|---|---|---|---|
| 4 | ಡಿ.ಜಿ.ಬಸವರಾಜಪ್ಪ ಬಿನ್ ಡಿ.ಜಿ.ಚನ್ನವೀರಪ್ಪ | ಡಿ.ಜಿ.ಬಸವರಾಜಪ್ಪ ಬಿನ್ ಡಿ.ಜಿ.ಚನ್ನವೀರಪ್ಪ | 74 | 2ಪಿ | 4-12½ ಪೈಕಿ0- 01½ 4-11 | ಖುಷ್ಕಿ | 75 | 74/2 | 74/2 | 74/2 | 0-17½ | 380 ಅಡಿಕೆ ಮರಗಳು 8 ತೆಂಗಿನ ಮರಗಳು |
| | ಒಟ್ಟು | | | | | | | | | | 0-35½ | |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ವಿಶೇಷ ಭೂಸ್ವಾಧೀನಾಧಿಕಾರಿಗಳು,
ತುಂಗಾ ಮೇಲ್ದಂಡೆ ಯೋಜನೆ,
ಶಿವಮೊಗ್ಗ

(ಶಿವಯೋಗಿ ಸಿ ಕಳಸದ)
ಭಾ.ಆ.ಸೇ.
ಆಯುಕ್ತರು,
ಪುಪು ಮತ್ತು ಭೂಸ್ವಾಧೀನ, ಕೃಮೇಯೋ,
ಹಾಗೂ ಪದನಿಮಿತ್ತ ಸರಕಾರದ ಕಾರ್ಯದರ್ಶಿಗಳು,
ಕರ್ನಾಟಕ ಸರಕಾರ, ಕಂದಾಯ ಇಲಾಖೆ,
ನವನಗರ, ಬಾಗಲಕೋಟೆ.

PR-279